ಜನ ಇಲ್ಲಿ ಪ್ರತಿದಿನ ನೆರೆಯುತ್ತಾರೆ ಅನ್ನುವ ಅಚ್ಚರಿ, ಈ ಊರು ನಿದ್ರಿಸುವುದೇ ಇಲ್ಲವೇ ಅನ್ನುವ ಬೆರಗುಗಳೆಲ್ಲವೂ ನಿಧಾನವಾಗಿ ನೀರಸವೆನಿಸತೊಡಗಿ ಇಬ್ಬರಿಗೂ ದಿನ ಬೆಳಗಾದರೆ ಕೂಗುತ್ತಿದ್ದ ಕೋಳಿ, ಕುಣಿಕೆ ಬಿಚ್ಚಿದ ಕೂಡಲೇ ಕೆಚ್ಚಲಿಗೆ ಬಾಯಿ ಹಾಕುತ್ತಿದ್ದ ಕರು, ಅಕ್ಕ ಪಕ್ಕದ ಮನೆಯವರೊಂದಿಗೆ ಆಡುತ್ತಿದ್ದ ಜಗಳ, ಇಡೀ ಊರ ವಿಷಯ ಚರ್ಚೆಯಾಗುತ್ತಿದ್ದ ತಮ್ಮ ಹೊಲಗಳು ನೆನಪಾಗತೊಡಗಿ ಮತ್ತೆ ಊರಿಗೆ ಹೊರಡುತ್ತೇವೆ ಎಂದು ಪಟ್ಟು ಹಿಡಿದು ಕೂತರು. ನಾನು ಗತ್ಯಂತರವಿಲ್ಲದೆ ಅವರನ್ನು ಕಳುಹಿಸಿಕೊಟ್ಟೆ. ಅದಾಗಿ ಎರಡೇ ತಿಂಗಳಲ್ಲಿ ಇಬ್ಬರೂ ಗದ್ದೆಯ ಬದುವಿನಲ್ಲಿ ಹರಿದಾಡುತ್ತಿದ್ದ ಹಾವು ಕಚ್ಚಿ ಸತ್ತು ಹೋದರು. ಅಂತ್ಯ ಸಂಸ್ಕಾರ ಮುಗಿಸಿ ಮತ್ತೆ ಬೆಂಗಳೂರಿಗೆ ಬಂದ ನಂತರ ಊರಿನ ಸಂಬಂಧ ಸಂಪೂರ್ಣ ಕಡಿದೇ ಹೋಯಿತು. ಮುಂದೆ ಊರು ನೆನಪಾದದ್ದು ನಾನು ರಿಟೈರ್ ಆದ ಮೇಲಷ್ಟೇ.

ಅತ್ತ ಕಾಲೇಜಿಗೂ ಹೋಗಲಾಗದೆ, ಇತ್ತ ಮನೆಯಲ್ಲೂ ಇರಲಾಗದಿದ್ದಾಗ ಮತ್ತೆ ಹುಟ್ಟಿದೂರು ಕಾಡತೊಡಗಿ ಒಂದು ಮುಂಜಾವು ಹೆಂಡತಿ ಮಕ್ಕಳನ್ನು ಕರೆದುಕೊಂಡು ಊರ ದಾರಿ ಹಿಡಿದೆ. ಆದರೆ ಆ ಇಪ್ಪತ್ತೈದು ವರ್ಷಗಳ ಕಾಲದ ಹರಿವಿನಲ್ಲಿ ನನ್ನೂರು ಪೂರ್ತಿ ಬದಲಾಗಿತ್ತು. ರಾತ್ರಿಯಾದರೂ ಖಾಲಿಯಾಗದಿರುತ್ತಿದ್ದ ಯಲ್ಲಮ್ಮನ ಗುಡಿಯ ಮುಂದಿನ ಅರಳಿಕಟ್ಟೆ ಹಾಡು ಹಗಲಲ್ಲೇ ಬಿಕೋ ಅನ್ನುತ್ತಿತ್ತು. ಅಪರಿಚಿತರನ್ನು ಕ್ಷಣ ಮಾತ್ರದಲ್ಲಿ ತನ್ನವರನ್ನಾಗಿಸುತ್ತಿದ್ದ ನನ್ನೂರಿನ ಜನರು ನನ್ನ ನೋಡುತ್ತಿದ್ದಂತೆ ಕಿಟಕಿ ಬಾಗಿಲುಗಳನ್ನು ಭದ್ರವಾಗಿ ಮುಚ್ಚುತ್ತಿದ್ದರು. ಊರಿಡೀ ಅವ್ಯಕ್ತ ಭೀತಿಯೊಂದು ಮನೆ ಮಾಡಿದೆಯೇನೋ ಎಂದು ಅನಿಸುತ್ತಿತ್ತು. ಸದಾ ಗಿಜಿಗುಟ್ಟುತ್ತಿದ್ದ ಊರ ಸಂತೆಯಲ್ಲೂ ಸ್ಮಶಾನ ಮೌನ. ಬಯಸೀ ಬಯಸಿ ಊರಿಗೆ ಬಂದರೆ, ಇಲ್ಲಿ ನಾನು ಕಾಣುತ್ತಿರುವುದಾದರೂ ಏನು ಅನ್ನುವ ಗೊಂದಲಕ್ಕೆ ಬಿದ್ದು ಮನೆ ತಲುಪಿ ಇನ್ನೇನು ಬೀಗ ತೆರೆದು ಒಳಗೆ ಕಾಲಿಡಬೇಕು ಅನ್ನುವಷ್ಟರಲ್ಲಿ ಮನೆಯೊಳಗೆ ಏನೋ ಸದ್ದಾದಂತೆ ಅನ್ನಿಸಿತು. ಅಂಜುತ್ತಲೇ ಒಳಗಡಿಯಿಟ್ಟರೆ, ಅಲ್ಲಿದ್ದ ಪಾತ್ರೆ ಪರಡಿಗಳು, ಬಳಸಿ ಬಿಸಾಕಿದ್ದ ಸೋಪ್ ತೀರಾ ಇತ್ತೀಚಿನವರೆಗೂ ಮನುಷ್ಯ ವಾಸವಿದ್ದ ಸ್ಪಷ್ಟ ಕುರುಹನ್ನು ನೀಡಿತು.

ಒಂದು ಕ್ಷಣ ಭಯವಾದರೂ ನನ್ನವ್ವ ಅಪ್ಪ ಬಾಳಿ ಬದುಕಿದ ಊರಿದು, ಅಕ್ಕಂದಿರು ಬದುಕುತ್ತಿರುವ ಊರಿದು ಅನ್ನುವ ಅಭಿಮಾನದಲ್ಲಿ ಎಲ್ಲಾ ಭಯಗಳು ತೂರಿ ಹೋದವು. ಊರಲ್ಲಿ ಯಾವುದೋ ಒಂದು ಅಸ್ಪಷ್ಟ ಭೀತಿಯ ಛಾಯೆಯಿದೆ ಎಂದೆನಿಸಿದರೂ ಮೊದಲ ಕೆಲ ದಿನಗಳು ಮನೆಯಲ್ಲೇನೂ ವಿಶೇಷ ಘಟಿಸಲಿಲ್ಲ. ನಾನೂ ಅವೆಲ್ಲಾ ನನ್ನ ಭ್ರಮೆ ಇರಬಹುದೇನೋ ಅಂದುಕೊಂಡು ಸುಮ್ಮನಾದೆ. ಮೇಲಾಗಿ ಅಕ್ಕಂದಿರನ್ನು ಇನ್ನೇನು ನೋಡೇ ಬಿಡುತ್ತೇನೆ ಅನ್ನುವ ಖುಷಿಯಲ್ಲಿ ಇದ್ದ ಅಲ್ಪ ಸ್ವಲ್ಪ ಅನುಮಾನಗಳು ಕೊಚ್ಚಿ ಹೋದವು.

ಆದರೆ ಒಂದಿಷ್ಟು ದಿನಗಳು ಕಳೆಯುತ್ತಿದ್ದಂತೆ ಹಳೆ ಗೆಳೆಯರು, ಊರ ತುಂಬಾ ನಕ್ಸಲರು ತುಂಬಿಕೊಂಡದ್ದನ್ನೂ, ಜನವಾಸವಿಲ್ಲದೆ ಪಾಳು ಬಿದ್ದಿದ್ದ ನನ್ನ ಮನೆಯೇ ಅವರ ಕಾರ್ಯಸ್ಥಾನವಾಗಿತ್ತು ಅನ್ನುವುದನ್ನೂ ನಿಧಾನವಾಗಿ ಬಾಯಿ ಬಿಟ್ಟರು. ಮಾತ್ರವಲ್ಲ ನನ್ನ ಹಿರಿಯಕ್ಕನ ಮಗನೂ ಅವರ ಪಾಳಯ ಸೇರಿಕೊಂಡಿದ್ದಾನೆ ಅನ್ನುವ ಕಟುಸತ್ಯವನ್ನೂ ತಿಳಿಸಿದರು. ಆ ಕ್ಷಣಕ್ಕೆ ನನಗೆ ಭೂಮಿಯೇ ಬಾಯಿ ತೆರೆದು ನನ್ನನ್ನು ನುಂಗಬಾರದೇ ಅನ್ನಿಸುತ್ತಿತ್ತು. ಮುಂದೇನು ಮಾಡಬೇಕು ಅನ್ನುವುದೇ ತೋಚಲಿಲ್ಲ. ಬೆಂಗಳೂರಿನ ಬದುಕಿನ ಧಾವಂತದಿಂದ ತಪ್ಪಿಸಿಕೊಳ್ಳಲು ಊರಿಗೆ ಬಂದರೆ ಅಲ್ಲಿ ಜೀವ ಕೈಯಲ್ಲಿ ಹಿಡಿದು ಬದುಕುವಂತಹ ಸ್ಥಿತಿ ಎದುರಾಗಿತ್ತು. ನಗರದಲ್ಲಿ ಹುಟ್ಟಿ ಬೆಳೆದ ಹೆಂಡತಿ ಮಕ್ಕಳು ನನ್ನ ಹಳ್ಳಿಗಿನ್ನೂ ಹೊಂದಿಕೊಳ್ಳಲು ಕಷ್ಟಪಡುತ್ತಲೇ ಇದ್ದರು. ಅದರ ಮಧ್ಯೆ ಈ ವಿಚಾರವನ್ನೂ ಹೇಳಿದರೆ ಮತ್ತಷ್ಟು ಭಯಪಟ್ಟುಕೊಳ್ಳುತ್ತಾರೆ ಅಂತಂದುಕೊಂಡು ಅವರಿಂದ ವಿಷಯ ಮುಚ್ಚಿಟ್ಟೆ. ಆದ್ರೆ ಏನಾದರೂ ಮಾಡಲೇಬೇಕಿತ್ತು, ಮೇಲಾಗಿ ಸೋದರಳಿಯನನ್ನು ಮತ್ತೆ ಮುಖ್ಯವಾಹಿನಿಗೆ ಕರೆತಂದು ಈ ಹಿಂಸಾಚಾರಗಳಿಂದ ಅವನನ್ನು ವಿಮುಖನಾಗಿಸಲೇಬೇಕಿತ್ತು.

ಸರಿ, ಆದದ್ದಾಗಲಿ ಎಂದು ಅವನನ್ನು ಹುಡುಕುತ್ತಾ ಹೊರಟೆ. ಯಾರ ಬಳಿ ಅವರ ಬಗ್ಗೆ ವಿಚಾರಿಸಿದರೂ ನಮಗೇನೂ ಗೊತ್ತಿಲ್ಲ ಅನ್ನುವ ಸಿದ್ಧ ಉತ್ತರವೇ ಸಿಗುತ್ತಿತ್ತು. ಅಂತೂ ಇಂತೂ ಕಷ್ಟಪಟ್ಟು ಕಾಡಿನ ಒಂದು ಮೂಲೆಯಲ್ಲಿ ಅವನನ್ನು ಕಂಡುಹಿಡಿದೆ. ಬೆನ್ನಲ್ಲಿ ಮಣಭಾರದ ಬ್ಯಾಗ್, ಬಗಲಲ್ಲಿ ಕೋವಿ, ಕಣ್ಣಲ್ಲಿ ಕ್ರಾಂತಿಯ ಕಿಚ್ಚು, ಮನುಷ್ಯತ್ವವನ್ನೇ ತಿಂದು ತೇಗುವಂತಹ ಗಾಂಭೀರ್ಯ. ಮಾತೆತ್ತಿದರೆ ಲೆನಿನ್, ಚೆಗುವೆರಾ, ಮಾರ್ಕ್ಸ್ ಎಂದೆಲ್ಲಾ ದೊಡ್ಡವರ ಮಾತುಗಳನ್ನು ತನಗೆ ಬೇಕಾದಂತೆ ತಪ್ಪು ತಪ್ಪಾಗಿ ಹೇಳುತ್ತಿದ್ದ. ಈ ದೇಶ ಉದ್ಧಾರವಾಗಬೇಕಾದರೆ ರಕ್ತಕ್ರಾಂತಿ ಆಗಲೇಬೇಕು ಅನ್ನುತ್ತಿದ್ದ. ಹಳ್ಳಿಯ ಏನೂ ಅರಿಯದ ಮುಗ್ಧನೊಬ್ಬನನ್ನು ಬ್ರೈನ್ ವಾಶ್ ಈ ಪರಿ ಬದಲಾಯಿಸಿ ಬಿಡುತ್ತದಾ? ಮನೆಯ ಅಂಗಳದಲ್ಲಿ ಸಕ್ಕರೆ ಚೆಲ್ಲಿ ಇರುವೆಯೂ ಬದುಕಿಕೊಳ್ಳಲಿ ಬಿಡಿ ಅನ್ನುತ್ತಿದ್ದವನ ಬಾಯಲ್ಲಿ ಈಗ ರಕ್ತ ಕ್ರಾಂತಿಯ ಮಾತು! ಎಂತಹ ವೈಚಿತ್ರ್ಯವಲ್ಲವೇ ಅಂತ ಅನ್ನಿಸುತ್ತಿದ್ದಂತೆ ಅವನು, 'ಹೌದೂ ಈಟ್ ದಿನ ಇಲ್ಲದ್ ನಂಟು ಇದ್ದಿಂದಗ್ಗೆ ಈಗ್ ನೆನಕೊಂಡ್ ಬರೋ ಅಕ್ಕಿಗತ್ತೇನು? ಮನೆಯಾಗೇನಾದ್ರೂ ಕ್ಯಾಮಿತ್ತಾ?' ಎಂದು ವ್ಯಂಗ್ಯವಾಗಿ ಕೇಳಿದ. ಏನೊಂದೂ ಉತ್ತರಿಸದೆ ನಾನು ಸುಮ್ಮನೆ ಅವನನ್ನೇ ನೋಡುತ್ತಾ ನಿಂತೆ. ಅವನವ್ವ ಬಯ್ಯುತ್ತಿದ್ದರೂ ಇವನನ್ನೇ ಅಲ್ಲವೇ ನಾನು ಮೊದಲ ಸೋದರಳಿಯ ಎಂದು ವಿಪರೀತ ಮುದ್ದು ಮಾಡುತ್ತಿದ್ದುದು? ಇವನಾದರೂ ಅಷ್ಟೆ, ಅವನ ಅಪ್ಪನಿಗಿಂತಲೂ ಹೆಚ್ಚಾಗಿ ನನ್ನನ್ನೇ ಹಚ್ಚಿಕೊಂಡಿದ್ದ. ಈಗ ತನಗೂ ಅವನಿಗೂ ಯಾವುದೇ ಸಂಬಂಧವಿಲ್ಲವೆಂಬಂತೆ ಮಾತಾನಾಡುತ್ತಿದ್ದಾನೆ. ನಾನು ಅವನ ಪಕ್ಕ ಕೂತು ಗಲ್ಲ ಹಿಡಿದೆತ್ತಿ, 'ಇವೆಲ್ಲಾ ಬುಟ್ಬುಡು ಮಗಾ, ಬಾ ಮನೆಗೆ ಹೋಗೋಣ' ಅಂದೆ. ಅವನು ಮತ್ತಷ್ಟು ಕೊಸರಿಕೊಳ್ಳುತ್ತಾ ನನ್ನಿಂದ ದೂರ ಸರಿದು, ಮತ್ತೆ ಕ್ರಾಂತಿ, ನ್ಯಾಯ ಅಂತೆಲ್ಲಾ ಬಡಬಡಿಸತೊಡಗಿದ. ಇನ್ನಿವನಲ್ಲಿ ಮಾತನಾಡಿ ಪ್ರಯೋಜನವಿಲ್ಲವೆಂದರಿತು, ಇವನ ಅವ್ವನ ಮೂಲಕವಾದರೂ ಇವನನ್ನು ಸರಿದಾರಿಗೆ ತರಲು ಪ್ರಯತ್ನಿಸೋಣ ಅಂದುಕೊಂಡು, 'ಹೋಗ್ಲಿ ಬುಡು. ಅಕ್ಕಯ್ಯ ಎಲ್ಲಿ?' ಅಂತ ಕೇಳಿದೆ. ಅವನು ಮುಖ ತಿರುಗಿಸಿ, 'ಎರಡು ವರ್ಷಗಳ ಹಿಂದೆ ಅವ್ವ, ಚಿಗವ್ವಂದಿರು ಪೊಲೀಸ್ ಕಾರ್ಯಾಚರಣೆಯಲ್ಲಿ ಸತ್ತೋದ್ರು' ಅಂತಂದು ನಡೆದು ಹೋದ. ಕ್ರಾಂತಿಯ ಬಗ್ಗೆ ಮಾತನಾಡುತ್ತಿದ್ದವನ ಕಣ್ಣಲ್ಲೂ ನೀರು ಗಿರಿಗಿಟ್ಲೆಯಾಡುತ್ತಿತ್ತಾ? ನಿಲ್ಲಿಸಿ ನೋಡುವಷ್ಟು ಧೈರ್ಯ ನನಗಿರಲಿಲ್ಲ.

ತೀರಾ ಎದೆಯೊಳಗೆ ಕೈ ಹಾಕಿ ಹೃದಯವನ್ನು ಹಿಂಡಿ ಮಧ್ಯರಸ್ತೆಯಲ್ಲಿ ಬಿಸುಟಿ ಹೋದಂಥಾ ಯಾತನೆ. ಅಂತ್ಯಸಂಸ್ಕಾರದಂದು ಮೃತದೇಹದ ಮೇಲೆ ಬಿದ್ದು ಅತ್ತು ಕರೆಯುತ್ತಿದ್ದ, ನಾನು ಚಿಕ್ಕವನಿದ್ದಾಗ ಹೆಗಲ ಮೇಲೆ ಕೂರಿಸಿ ಮೆರವಣಿಗೆ ಮಾಡುತ್ತಿದ್ದ, ಅವ್ವನಿಗೆ ಗೊತ್ತಾಗದಂತೆ ಸಾಸಿವೆ ಡಬ್ಬದಲ್ಲಿದ್ದ ಐದೋ ಹತ್ತೋ ಪೈಸೆಯನ್ನು ನನಗೆ ಕದ್ದು ಮುಚ್ಚಿ ಕೊಡುತ್ತಿದ್ದ, ನಾನು ಶಾಲೆಗೆ ಹೋಗುವುದಿಲ್ಲವೆಂದು ಹಠ ಹಿಡಿದಾಗೆಲ್ಲಾ ಗೋಡಂಬಿಯ ಆಸೆ ತೋರಿಸಿ ನನ್ನ ಶಾಲೆಗೆ ಕಳುಹಿಸುತ್ತಿದ್ದ ಅಕ್ಕಂದಿರ ಮುಖವನ್ನು ನೆನಪಿಸಿಕೊಳ್ಳಲು ಅದೆಷ್ಟೇ ಪ್ರಯತ್ನಪಟ್ಟರೂ ರಕ್ತದ ಮಡುವಲ್ಲಿ ಬಿದ್ದು ಅವರು ಒದ್ದಾಡಿರಬಹುದಾದ ಚಿತ್ರ ಮರೆಯಾಗುತ್ತಲೇ ಇರಲಿಲ್ಲ. ತಪ್ಪೆಲ್ಲಾ ನನ್ನದೇ, ಅವ್ವಅಪ್ಪ ಹೋದ ನಂತರ ಈ ಊರಿನ ಕಡೆಗೆ ತಲೆಹಾಕದೇ ತಪ್ಪು ಮಾಡಿಬಿಟ್ಟೆ ಅನ್ನುವ ಅಪರಾಧೀ ಭಾವ ನನ್ನ ಕಾಡತೊಡಗಿ ಕೊನೆಯ ಪ್ರಯತ್ನವೆಂಬಂತೆ ಕೆಲ ದಿನಗಳಲ್ಲೇ ಮತ್ತೆ ಅವನ ಜಾಡು ಹಿಡಿದು ಹೊರಟೆ. ಅವನೊಬ್ಬನನ್ನಾದರೂ ಈ ನರಕದಿಂದ ಮುಕ್ತಗೊಳಿಸಿ ನಾನು ಮತ್ತೆ ಸಂಸಾರ ಸಮೇತನಾಗಿ ಬೆಂಗಳೂರಿಗೆ ಹೋಗಿಬಿಡೋಣ ಅಂದುಕೊಂಡೆ. ಮೇಲಾಗಿ ಸಾಯಿಸುವಂತಹ ಯಾವ ತಪ್ಪನ್ನು ಅಕ್ಕಂದಿರು ಮಾಡಿದ್ದರು ಅನ್ನುವುದನ್ನೂ ನನಗೆ ತಿಳಿದುಕೊಳ್ಳಬೇಕಿತ್ತು. ಆದ್ರೆ ಅವನು ನನ್ನ ಯಾವ ಪ್ರಶ್ನೆಗಳಿಗೂ ಉತ್ತರಿಸಲು ತಯಾರಿರಲಿಲ್ಲ. ಇವಕ್ಕೆಲ್ಲಾ ನೀನೇ ಕಾರಣ ಅನ್ನುವ ಸ್ಪಷ್ಟ ತಿರಸ್ಕಾರ ಅವನ ಕಣ್ಣುಗಳಲ್ಲಿ ಎದ್ದು ಕಾಣುತ್ತಿತ್ತು. ಇವನಿನ್ನು ಹಿಂದಿರುಗಿ ಬರಲಾರದಷ್ಟು ಮುಂದುವರಿದಿದ್ದಾನೆ ಅನ್ನಿಸಿ ಅಲ್ಲಿಂದ ಹಿಂದಿರುಗಿ ಬಂದೆ. ತೀರಾ ಕಾಡು ದಾಟುವ ಮುನ್ನ ಹಿಂದಿನಿಂದ ಓಡಿ ಬಂದು 'ಮಾವ ಈ ಊರಾಗೆ ಯಾವ್ ಹೊತ್ತಲ್ಲಿ ಏನ್ ಆಗ್ತಾದೋ ಹೇಳಕೊ ಆಗೋಲ್ಲ, ಇಲ್ಲಿಂದ ಹೊಳ್ಳಿ ಹೋಗಿ ನೀನಾದ್ರೂ ಬದ್ಕೊ' ಅಂದ. ನಾನು 'ನಮ್ಮ ಜೋಡಿ ನೀನೂ ಬರ್ತಿ ಅಂಥಾದ್ರೆ ಊರು ಬಿಟ್ಟ್ ಹೋಗ್ತೇವೆ. ಇಲ್ಲಿದ್ದರೆ ಅದೇನಾಗುತ್ತೈತೋ ಆಗ್ಲಿ, ನಾವಿಲ್ಲೆ ಇರ್ತೀವಿ' ಅಂದೆ. ಅವನು ನಿರ್ಲಿಪ್ತನಂತೆ 'ನಿಮ್ಮಿಷ್ಟ' ಅಂತಂದು ಬೆನ್ನು ತಿರುಗಿಸಿ ನಡೆಯ ತೊಡಗಿದ. ಅವನ ನಿರ್ವಿಕಾರದಲ್ಲೂ ತನ್ನವರು ಅನ್ನುವ ಆರ್ದ್ರತೆಯಿತ್ತಾ? ಗೊತ್ತಿಲ್ಲ.

ಅರಗಿಸಿಕೊಳ್ಳಲಾಗದ ಸತ್ಯವನ್ನು ಅರಗಿಸಿಕೊಳ್ಳಲೆತ್ನಿಸುತ್ತಾ

